**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ.ಟಿ.ಎಸ್. ವಕೀಲರಿಂದಃ</u>**

7. ನಿಡಿ.4 ರ 2 ನೇ ಪುಟದ 2 ನೇ ಲೈನ್ ನಲ್ಲಿ ದಸ್ತಾವೇಜು ಸಂಖ್ಯೆ ಪಿ.5026 ಪ್ರಿಂಟ್ ಆಗಿ ರೌಂಡ್ ಮಾಡಿರುತ್ತಾರೆ ಎಂದರೆ ಅವರು ಏನು ಪ್ರಿಂಟ್ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಈ ದಾಖಲೆಯಲ್ಲಿ ರೌಂಡ್ ಮಾಡಿ ಮುಂದೆ ಕೈಬರವಣಿಗೆಯಿಂದ ಬರೆದಿದ್ದಾರೆ ಎಂದರೆ ಸಾಕ್ಷಿಯು ಮೂಲ ದಾಖಲಾತಿ ನಾನು ನೋಡಿ ಅದರಲ್ಲಿ ಏನು ಬರೆದಿದೆ ನೋಡಿ ಹೇಳುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ.4 ತೋರಿಸಿದ್ದು, ಸಾಕ್ಷಿಯು ಅದು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ.4 ರಲ್ಲಿ ಮೊದಲು ಟೈಪ್ ಮಾಡಿ ನಂತರ ಕೈಯಿಂದ ಬರೆದಿದ್ದಾರೆ ಎಂದರೆ ಇದೇ ದಿನ ನಾನು ಈ ಬರವಣಿಗೆ ಮೊದಲ ಭಾರಿ ನೋಡುತ್ತಿದ್ದೇನೆ.

8. ನಿಡಿ.4 ರ 2 ನೇ ಪುಟದಲ್ಲಿ ಪ್ರಿಂಟ್ ದಿನಾಂಕ ಮತ್ತು ಟೈಮ್ ನಮೂದಾಗಿದೆ ಎಂದರೆ ಹೌದು. ದಿ.04/12/2008 ಸಂಜೆ 4.40 ಎಂದು ಪ್ರಿಂಟ್ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಈ ಬರವಣಿಗೆ ಆ ದಿನ ಓದಿಲ್ಲ. ಈಗ ಈ ಬರವಣಿಗೆ ಇದೆಯಾ ಎಂದರೆ ಈಗ ನೋಡಿರುತ್ತೇನೆ, ಆ ರೀತಿ ಬರೆದಿದೆ. ಈ ಬರವಣಿಗೆ ಸರಿ ಇದೆಯೋ ಇಲ್ಲವೋ ಎಂದರೆ ನಾನು ಆ ದಿನ ನೋಡೇ ಇಲ್ಲ ಎಂದು ಹೇಳುತ್ತಾರೆ. ಈ ಬರವಣಿಗೆ ಸರಿ ಇದೆಯಾ ಅಥವಾ ತಪ್ಪಿದೆಯಾ ಎಂದರೆ ಅದು ನನಗೆ ಗೊತ್ತಿಲ್ಲ. ಅದೇ ದಿನ ನೋಂದಣಿ ಶುಲ್ಕ ರೂ.1000/, ಸ್ಟಾಂಪ್ ಶುಲ್ಕ, ಪರಿವರ್ತನಾ ಶುಲ್ಕ, ಪರಿಶೋಧನ ಶುಲ್ಕ ಇದೆ ಎಂದರೆ ಅದು ನನ್ನ ತಂದೆ ಮಾಡಿರುತ್ತಾರೆ, ನನಗೆ ಗೊತ್ತಿಲ್ಲ. ಆ ದಿನ ನಾನು ಹೊರಗಡೆ ಇದ್ದೆ, ನನ್ನ ತಂದೆ ಸಬ್ ರಿಜಿಸ್ಟರ್ ಕಛೇರಿ ಒಳಗಡೆ ಹೋಗಿರುತ್ತಾರೆ, ಆದ್ದರಿಂದ ಅಲ್ಲಿ ಏನೇನು ಆಗಿದೆ ನನಗೆ ಗೊತ್ತಿಲ್ಲ.

9. ಡಿ.ಡಿ.4 ರ ಪುಟ ನಂ.4 ರಲ್ಲಿ ಸಾಕ್ಷಿದಾರರಾದ ಲೋಕೇಶ್ ಮತ್ತು ಎನ್.ಗೋವಿಂದ ಸ್ವಾಮಿ ರವರ ಹೆಸರು ಮತ್ತು ಸಹಿಗಳು ಇರುತ್ತವೆ ಎಂದರೆ ಹೌದು. ಅದೇ ಪುಟದ ಕೆಳಗಡೆ ಸದರಿ ದಾಖಲೆಯನ್ನು ದಿ.4/12/2008 ರಂದು ನೊಂದಾಯಿಸಲಾಗಿದೆ ಎಂದು ಬರೆದಿದೆ ಎಂದರೆ ಹೌದು. ನಿಡಿ.4 ರಲ್ಲಿ ಕೊನೆಯ ಪುಟದಲ್ಲಿ ಬರೆದಿರುವ ಕೈ ಬರವಣಿಗೆ ಸಬ್ ರಿಜಿಸ್ಟರ್ ರವರದ್ದು. ಸರ್ವೆ ಸ್ಕೆಚ್ ನನ್ನ ತಂದೆ ಅರ್ಜಿ ಕೊಟ್ಟಿದ್ದರು. ಫೀಯನ್ನು ನನ್ನ ತಂದೆಯೇ ಭರಿಸಿರುತ್ತಾರೆ. ನನ್ನ ತಂದೆ ಫೀ ಯನ್ನು ಕಟ್ಟಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ಆಗುತ್ತದೆಯಾ ಎಂದರೆ ಹೌದು. ಫೀ ಕಟ್ಟಿದ ತಿಂಗಳು, ತಾರೀಖು ಹೇಳಲು ಆಗುತ್ತಾ ಎಂದರೆ 5_6 ಭಾರಿ ಕಟ್ಟಿರುತ್ತಾರೆ. ಪ್ರತಿಭಾರಿ ಎಷ್ಟು ಹಣ ಕಟ್ಟಿದ್ದಾರೆ ಎಂದರೆ ಒಂದುಭಾರಿ ರೂ.600/ ಮತ್ತು ಹಣವನ್ನು ಕಟ್ಟಿರುತ್ತಾರೆ.

10. ದಿ.04/12/2008 ರಂದು ರೂ.39,997/ ಹಣವನ್ನು ಕಟ್ಟಿರುತ್ತಾರೆ ಎಂದರೆ ಹೌದು. ನಿ.ಡಿ.4 ರ 2 ನೇ ಪುಟದಲ್ಲಿರುವ ಸಾಕ್ಷಿದಾರರು ಮತ್ತು 4 ನೇ ಪುಟದಲ್ಲಿ ಇರುವ ಸಾಕ್ಷಿದಾರರು ಬೇರೆ ಬೇರೆ ವ್ಯಕ್ತಿಗಳು ಎಂದರೆ ಲೋಕೇಶ್ ಎನ್ನುವವರು ಎರಡು ಕಡೆ ಸಹಿ ಮಾಡಿದ್ದು, ಇನ್ನೊಬ್ಬ ಸಾಕ್ಷಿ ಬೇಕು ಎಂದಾಗ ನನ್ನ ತಂದೆ ಅವರ ಸ್ನೇಹಿತ ರಾಜಪ್ಪ ಎನ್ನುವವರನ್ನು ಕರೆಯಿಸಿ ಸಾಕ್ಷಿಯಾಗಿ ಸಹಿ ಮಾಡಿಸಿರುತ್ತಾರೆ.

11. ನಿಡಿ.4 ರಲ್ಲಿ 4 ನೇ ಪುಟದ ಕೊನೆಯಲ್ಲಿ ಬರೆದಿರುವ ಬರವಣಿಗೆ ಸರಿ ಇದೆಯಾ ಎಂದರೆ ಹೌದು. ನಿಡಿ.4 ರ ಷೆಡ್ಯೂಲ್‌ನಲ್ಲಿ ಬರೆದಿರುವ ಸರ್ವೆ ನಂಬರ್ ಮತ್ತು 4 ನೇ ಪುಟದ ಕೊನೆಯಲ್ಲಿ ಬರೆದಿರುವ ಸರ್ವೆ ನಂಬರ್ ಒಂದೇ ಅಲ್ಲ ಎಂದರೆ ಸರಿಯಲ್ಲ. ಕಾರಣ 2008 ರಲ್ಲಿ ಸ.ನಂ.340/ಪಿ1 ಎಂದು ಇದ್ದು, ಪೋಡಾದ ನಂತರ ಸ.ನಂ.340/2 ಎಂದು ಆಗಿರುತ್ತದೆ ಎಂದು ಹೇಳುತ್ತಾರೆ. ಈ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಹೌದು. ಅದು ಯಾವ ಯಾವ ದಾಖಲೆ ಎಂದರೆ ಸ್ಕೆಚ್, ಪತ್ರ , ಮುಟೇಷನ್, ಇ.ಸಿ. ಎಂದು ಹೇಳುತ್ತಾರೆ. ಷೆಡ್ಯೂಲ್‌ನಲ್ಲಿ ಇರುವ ಸರ್ವೆ ನಂಬರ್ ತಿದ್ದುಪಡಿ ಮಾಡುವ ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ. ನಾನು ನನ್ನ ಪರವಾಗಿ ಇ.ಸಿ. ಹಾಜರುಪಡಿಸಿರುತ್ತೇನೆ

ಎಂದರೆ ಹೌದು. ಬ್ಯಾಂಕಿನಲ್ಲಿ ಯಾರು ಸಾಲ ಪಡೆದಿದ್ದಾರೆ ಎಂದರೆ ನನ್ನ ತಂದೆ ಯೂನಿಯನ್ ಬ್ಯಾಂಕ್‌ನಲ್ಲಿ ಸಾಲ ಪಡೆದಿರುತ್ತಾರೆ. ಆ ಸಮಯದಲ್ಲಿ ಈ ಕೇಸು ಚಾಲ್ತಿಯಲ್ಲಿತ್ತು ಎಂದರೆ ಇಲ್ಲ. ಈ ಕೇಸು ಚಾಲ್ತಿಯಲ್ಲಿರುವಾಗ ಉದ್ದೇಶಪೂರ್ವಕವಾಗಿ ನನ್ನ ತಂದೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಪಡೆದಿದ್ದರಿಂದ ನಾವು ಅದನ್ನು ತೀರಿಸಲು ಬಾದ್ಯಸ್ಥರು ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಮಾಡಿದ್ದು, ಅವರೆ ಸಾಲವನ್ನು ತೀರಿಸಲು ಬಾದ್ಯಸ್ಥರು ಎಂದು ಹೇಳುತ್ತಾರೆ. ದಿ.01/04/2008 ರಿಂದ 19/07/2022 ರವರೆಗೆ ಇ.ಸಿ. ಯಾರ ಹೆಸರಿಗೆ ಇದೆ ಎಂದರೆ ನನ್ನ ತಂದೆಯ ಹೆಸರಿಗೆ ಇದೆ. ನನ್ನ ತಂದೆಯ ಹೆಸರಿಗೆ ಇಲ್ಲದಿದ್ದರೂ ಕೂಡ, ನನ್ನ ತಂದೆಯ ಹೆಸರಿಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ವಾದಿಯರು ತಹಶೀಲ್ದಾರ್ ಕಛೇರಿಗೆ ಖಾತಾ ಬದಲಾವಣೆ ಮಾಡದಂತೆ ಅರ್ಜಿ ನೀಡಿದ್ದರು ಎಂದರೆ 2019 ರಲ್ಲಿ ನಮ್ಮ ಹೆಸರಿಗೆ ಖಾತಾ ಮಾಡಿಸುವಾಗಿ ವಾದಿಯರು ಬಂದು ತಕರಾರು ಮಾಡಿರುತ್ತಾರೆ. ತಹಶೀಲ್ದಾರ್‌ರವರು ವಾದಿಯರಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ನಮ್ಮ ಹೆಸರಿಗೆ ಖಾತೆ ಆದ ನಂತರ ಅವರು ಹಿಂಬರಹ ಪಡೆದಿರುತ್ತಾರೆ. ತಹಶೀಲ್ದಾರ್‌ರವರು ವಾದಿಯರಿಗೆ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ತಹಶೀಲ್ದಾರ್‌ರವರು ಮಾಡಿದ ಆದೇಶದ ಮೇರೆಗೆ ವಾದಿಯರು ಎ.ಸಿ. ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಎ.ಸಿ. ಕೋರ್ಟ್‌ನಿಂದ ನೋಟೀಸ್ ಬಂದಿತ್ತ ಎಂದರೆ ಹೌದು. ನೋಟೀಸು ಬಂದ ನಂತರ ವಕೀಲರನ್ನು ನೇಮಿಸಿ ತಕರಾರು ಸಲ್ಲಿಸಿದ್ದೆ ಎಂದರೆ ಹೌದು. ವಾದ ವಿವಾದ ನಡೆದ ನಂತರ ಎ.ಸಿ. ರವರು ಆದೇಶ ಮಾಡಿದ್ದಾರೆ ಎಂದರೆ ಇಲ್ಲಿ ಕೇಸು ಇರುವುದರಿಂದ ಅಲ್ಲಿ ವಾದ ಮಾಡಿಲ್ಲ ಎಂದು ಹೇಳುತ್ತಾರೆ. ಮಾನ್ಯ ಎ.ಸಿ. ರವರು ಸಿವಿಲ್ ನ್ಯಾಯಾಲಯದಲ್ಲಿ ಕೇಸು ಚಾಲ್ತಿಯಲ್ಲಿರುವುದರಿಂದ ಮಾನ್ಯ ಎ.ಸಿ. ರವರು ಆದೇಶ ಮಾಡಲು ಬರುವುದಿಲ್ಲ, ಸಿವಿಲ್ ನ್ಯಾಯಾಲಯದಲ್ಲಿಯೇ ಬಗೆಹರಿಸಿಕೊಳ್ಳಿ ಎಂದು ಆದೇಶ ಮಾಡಿದ್ದಾರೆ ಎಂದರೆ ಹೌದು.

ಡಿ. ಡಬ್ಲೂ.01

13. ಮಹಜರ್‌ನಲ್ಲಿ ವಾದಿಯ ಅಥವಾ ಅವರ ತಂದೆಯ ಸಹಿ ಇದೆಯಾ ಎಂದರೆ ಮಹಜರ್ ಮಾಡಿಲ್ಲ ಎಂದು ಹೇಳುತ್ತಾರೆ. ಮಹಜರ್‌ಗೆ ಕರಿಯಪ್ಪ ಎನ್ನುವವರು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಎಂದರೆ ಇಲ್ಲ. ಸ್ಕೆಚ್ ನಲ್ಲಿ ಸ.ನಂ.340 ರ 1 ನೇ ಪೋಡು 1 ಎಕರೆ 07 ಗುಂಟೆ ಕರಿಯಪ್ಪ ಬಿನ್ ಬಡಕರಿಯಪ್ಪ ಇವರಿಗೆ ಸೇರಿರುತ್ತದೆ ಎಂದರೆ ಹೌದು. ಸದರಿ ಆದೇಶದ ಪ್ರಕಾರ ಅವರ ಹೆಸರಿಗೆ ಪಹಣಿ ಮತ್ತು ಮುಟೇಷನ್ ಇದೆ ಎಂದರೆ ಹೌದು. ಸದರಿ ಜಮೀನು ಅವರ ಸ್ವಾದೀನ ಮತ್ತು ಹಕ್ಕಿನಲ್ಲಿ ಇರುತ್ತದೆ ಎಂದರೆ ಹೌದು. ಸ್ಕೆಚ್ ನಲ್ಲಿ ಸ.ನಂ.340 ರ 2 ನೇ ಪೋಡು 9 ಎಕರೆ 23 ಗುಂಟೆ ಕೆ.ಎಸ್.ದಾಸಪ್ಪ ಬಿನ್ ಕೆಂಜಡಿಯಪ್ಪ ಇವರಿಗೆ ಸೇರಿರುತ್ತದೆ ಎಂದರೆ ಇಲ್ಲ. ನಿಡಿ.4 ರಲ್ಲಿ ಸ.ನಂ.340/1 ಎಂದು ಷೆಡ್ಯೂಲ್‌ನಲ್ಲಿ ನಮೂದಾಗಿದೆ ಎಂದರೆ ಹೌದು.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

ಓ ಹೇ ಕೇ ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.
ನ್ಯಾಯಾಧೀಶರು, ಚಿತ್ರದುರ್ಗ